ಮೈಸೂರ ಗೆಜೆಟ್ಟ

ಸರ್ಕಾರದಿಂದ ಪಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಜುಲೈ ತಾ॥ 5, ಸ॥ 1884.

ಸೂಚನೆ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನ್‌ಮೆಂಟ್, ರೆಸಿಡೆಂಟರು, ಜೀಫ್ ಜಡ್ಜ್‌ರುವಗ್ಯೆರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಬೆಂಗಳೂರು ರೆಸಿಡೆಂಟ್ಟರ್ರ ಇಲಾಖಾ.

ಇಸ್ತಿಹಾರ್ ನಾಮೆ.

ಮೈಸೂರು ಜೀಫ್ ಕೋರ್ಟ್‌ನಲ್ಲಿ.

ಸ॥ 1884ನೇ ಇಸವಿ ಅರ್ಜೀ ನಂಬರ್ 7.

ಮೃತಪಟ್ಟ ಎಸ್. ದೇವರಾಜಯ್ಯರ ಆಸ್ತಿ ವಿಷಯದಲ್ಲಿ—

ಅರ್ಜೀದಾರು) ಲಕ್ಷ್ಮಕ್ಕಮ್ಮ, ಮೃತಪಟ್ಟ ಸದರೀ ಎಸ್. ದೇವರಾಜಯ್ಯರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ, ಶೇಲಂ ಸ್ಥಳದ ಲಕ್ಷ್ಮಕ್ಕಮ್ಮನವರು, ಮದರಾಸ್ ವಾಸಸ್ಥರಾಗಿ ಮೃತಪಟ್ಟ ಎಸ್. ದೇವರಾಜಯ್ಯರ ಜೆಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ಫಾತೀಯಸ್. ದೇವರಾಜಯ್ಯನವರ ಮೈನರ್ ಮಕ್ಕಳಾದ ಸುಬ್ಬರಾಯ ಐಯ್ಯರ್, ವೆಂಕಟರಮಣಯ್ಯರ್ ಇವರಿಗೆ ಗಾರ್ಡಿಯರ್ ಆಗಿ ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಲಕ್ಷ್ಮಕ್ಕಮ್ಮನವರ ಅರ್ಜೀಯನ್ನು 1884ನೇ ಇಸವಿ ಜುಲೈ ತಿಂಗಳು ತಾರೀಖು 22ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಎಸ್. ದೇವರಾಜಯ್ಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಜೂನ್ ತಿಂಗಳು 27ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಕೋರ್ಟು ಹುಕುಂ ಮೇರೆ,

ಎಸ್. ಹೇನೂಜಿ ರಾವ್,

ರಜಿಸ್ಟ್ರಾರ್.